# ಆನ್‌ಲೈನ್ ಲೋನ್ ಆ್ಯಪ್‌ಗಳಿಗೆ ಗೂಗಲ್ ಅರ್ಧಚಂದ್ರ

■ ಶಶಿಕುಮಾರ್ ಸಿ.

ಕಳೆದ ಹಲವು ವರ್ಷಗಳಿಂದ ತೆರೆಮರೆಯಲ್ಲಿ ಲಾಭ ಮಾಡುತ್ತಿದ್ದ ಮತ್ತು ನಾಯಿಕೊಡೆಗಳಂತೆ ತಲೆಎತ್ತಿ ಸಾರ್ವಜನಿಕರಿಗೆ ವಿಪರೀತ ಬಡ್ಡಿ ವಿಧಿಸಿ ಸಾಲ ನೀಡುತ್ತಿದ್ದ ಸುಮಾರು 2000 ಲೋನ್ ಆ್ಯಪ್‌ಗಳನ್ನು ಗೂಗಲ್ ಕಂಪನಿಯು ಪ್ಲೇಸ್ಟೋರ್‌ನಿಂದ ತೆಗೆದುಹಾಕಿದೆ. ಕಳೆದ ಏಳು ತಿಂಗಳ ಈಚೆಗೆ ಗೂಗಲ್ ತೆಗೆದುಕೊಂಡ ಕ್ರಮ ಇದಾಗಿದೆ. ಅಲ್ಲದೇ ಇಂತಹ ಆ್ಯಪ್‌ಗಳಿಂದ ಅಂತರ ಕಾಯ್ದುಕೊಳ್ಳುವಂತೆ ಗ್ರಾಹಕರಿಗೆ ಸೂಚಿಸಿದೆ.




ಕೆಲವೇ ನಿಮಿಷಗಳಲ್ಲಿ ಲೋನ್ ನೀಡುವುದಾಗಿ ವಿಧವಿಧವಾದ ಆಮಿಷಗಳನ್ನೊಡ್ಡಿ ಸಾರ್ವಜನಿಕರನ್ನು ತಮ್ಮ ಮೋಸದ ವಂಚನೆಗೆ ಬೀಳಿಸಿಕೊಳ್ಳುತ್ತಿದ್ದ ಬಹುದೊಡ್ಡ ವ್ಯವಸ್ಥಿತ ಜಾಲಕ್ಕೆ ಗೂಗಲ್ ಕಡಿವಾಣ ಹಾಕಿದೆ. ನಕಲಿ ಆನ್‌ಲೈನ್ ಲೋನ್ ಆ್ಯಪ್‌ಗಳ ಪೈಕಿ ಬಹುತೇಕ ಆ್ಯಪ್‌ಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಒಬ್ಬನೇ ವ್ಯಕ್ತಿ ಹಲವು ಆ್ಯಪ್‌ಗಳನ್ನು ರೂಪಿಸಿ ಲಾಭಗಳಿಸುವ ವ್ಯವಸ್ಥೆಯೂ ಚಾಲ್ತಿಯಲ್ಲಿದೆ. ಅಲ್ಲದೆ ಒಮ್ಮೆ ಲಾಗಿನ್ ಆಗಿ ಸಾರ್ವಜನಿಕರು ಪೂರೈಸುವ ಎಲ್ಲ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸುವ ಇಂತಹ ಆ್ಯಪ್‌ಗಳು ಗ್ರಾಹಕರಿಗೆ ತಿಳಿಯದಂತೆ ತನ್ನಂತೆಯೇ ಸಕ್ರಿಯವಾಗಿರುವ ಇತರ ಆ್ಯಪ್‌ಗಳೊಂದಿಗೆ ಗ್ರಾಹಕರ ವೈಯಕ್ತಿಕ ಮಾಹಿತಿಯನ್ನು ಹಣಕ್ಕಾಗಿ ಹಂಚಿಕೊಂಡು ವಂಚನೆ ಮಾಡುತ್ತವೆ.

ತಡವಾಗಿಯಾದರೂ ಎಚ್ಚೆತ್ತುಕೊಂಡಿರುವ ಗೂಗಲ್, ಆನ್‌ಲೈನ್ ಲೋನ್ ಜಾಲದ ವಿವಿಧ ಆಮಿಷಗಳಿಗೆ ಜನರು ಬಲಿಯಾಗುತ್ತಿದ್ದುದ್ದಕ್ಕೆ ಅಲ್ಪಪ್ರಮಾಣದಲ್ಲಿ ಕಡಿವಾಣ ಹಾಕಿದೆ.

‘ಮಾಹಿತಿ ತಂತ್ರಜ್ಞಾನ ಸಚಿವಾಲಯ ಜಾರಿ ಮಾಡಿರುವ ನಿಯಮಗಳಲ್ಲಿ ಸಾರ್ವಜನಿಕರ ಹಿತಾಸಕ್ತಿ ಹಾಗೂ ಆರ್ಥಿಕ ಭದ್ರತೆ ಕಾಪಾಡುವ ನಿಯಮವೂ ಇದೆ. ಇದೇ ನಿಯಮದಡಿ ಗೂಗಲ್ ಪ್ಲೇ ಸ್ಟೋರ್‌ನಿಂದ ಸಾವಿರಾರು ನಕಲಿ ಆನ್‌ಲೈನ್ ಲೋನ್ ಆ್ಯಪ್‌ಗಳನ್ನು ನಿರ್ಬಂಧಿಸಲಾಗಿದೆ. ಹೀಗೆ ತೆಗೆದು ಹಾಕಲಾದ ಶೇ. 50ಕ್ಕಿಂತ ಅಧಿಕ ಲೋನ್ ಆ್ಯಪ್‌ಗಳು ಗೂಗಲ್‌ನ ನೀತಿಗಳನ್ನು ಉಲ್ಲಂಘಿಸಿವೆ’ ಎಂಬುದನ್ನು ಗೂಗಲ್ ಏಷ್ಯಾದ ಟ್ರಸ್ಟ್ ಮತ್ತು ಸುರಕ್ಷತೆಯ ಹಿರಿಯ ನಿರ್ದೇಶಕ, ಮುಖ್ಯಸ್ಥ ಸೈಕತ್ ಮಿತ್ರಾ ತಿಳಿಸಿದ್ದಾರೆ. ಇದೇ ವೇಳೆ, ಸರ್ಕಾರದಿಂದ ಪ್ರಮಾಣೀಕೃತ ಆ್ಯಪ್‌ಗಳು ಮಾತ್ರ ಆನ್‌ಲೈನ್ ಮೂಲಕ ಸಾಲ ನೀಡುವ ಹಕ್ಕನ್ನು ಹೊಂದಿವೆ ಎಂದು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ. ಮಾನಸಿಕ ಕಿರುಕುಳದಿಂದಾಗಿ ಬಹಳಷ್ಟು ಮಂದಿ ಗ್ರಾಹಕರು ಆತ್ಮಹತ್ಯೆ ಮಾಡಿಕೊಂಡಿರುವುದೂ ಈ ಹಿಂದೆ ವರದಿಯಾಗಿದ್ದು, ಇದೇ ಕಾರಣಕ್ಕೆ ಪ್ಲೇಸ್ಟೋರ್‌ನಲ್ಲಿರುವ ಸಾವಿರಾರು ಸಂಖ್ಯೆಯ ಆನ್‌ಲೈನ್ ಲೋನ್ ಆ್ಯಪ್‌ಗಳನ್ನು ಪರಿಶೀಲಿಸಿರುವುದಾಗಿ ಗೂಗಲ್ ಇಂಡಿಯಾ ಈಚೆಗೆ ಹೇಳಿತ್ತು. ಅಂತೆಯೇ ಬಳಕೆದಾರರ ಸುರಕ್ಷತಾ ನೀತಿಗಳನ್ನು ಉಲ್ಲಂಘಿಸಿದ ಆ್ಯಪ್‌ಗಳನ್ನು ತಕ್ಷಣವೇ ಪ್ಲೇ ಸ್ಟೋರ್‌ನಿಂದ ತೆಗೆದುಹಾಕಿದೆ.

ಆಗಸ್ಟ್ 10ರಂದು ಆರ್‌ಬಿಐ, ಡಿಜಿಟಲ್ ಸಾಲಕ್ಕಾಗಿ ಮಾರ್ಗಸೂಚಿ ಪಟ್ಟಿ ಬಿಡುಗಡೆ ಮಾಡಿತ್ತು. ಅದರಂತೆ ಆರ್‌ಬಿಐಗೆ ನೋಂದಾಯಿತ ಘಟಕಗಳ ಮೇಲೆ ಮಾತ್ರ ಅಧಿಕಾರವಿದೆ. ಹೀಗಾಗಿ, ನಕಲಿ ಆನ್‌ಲೈನ್ ಲೋನ್ ಆ್ಯಪ್‌ಗಳ ಮೇಲೆ ಕ್ರಮಕೈಗೊಳ್ಳುವ ಯಾವುದೇ ಅಧಿಕಾರವು ಇಲ್ಲವೆಂಬುದನ್ನು ಪರೋಕ್ಷವಾಗಿ ತಿಳಿಸಿತ್ತು. ಈ ವಿಧಾನದಲ್ಲೂ ತಪ್ಪಿಸಿಕೊಂಡಿದ್ದ ಆನ್‌ಲೈನ್ ಲೋನ್ ಆ್ಯಪ್‌ಗಳಿಗೆ ಗೂಗಲ್ ಬಲೆಬೀಸಿ ಹೊರಹಾಕಿದೆ. ■

# ಸ್ನ್ಯಾಪ್‌ನಲ್ಲಿ ಡ್ಯುಯಲ್ ಕ್ಯಾಮೆರಾ!

ಸೋಷಿಯಲ್ ಮೀಡಿಯಾದಲ್ಲಿ ಸ್ನ್ಯಾಪ್‌ಚಾಟ್ ಈಗಲೂ ಛಾಪನ್ನು ಉಳಿಸಿಕೊಂಡಿದ್ದು, ತನ್ನ ಬಳಕೆದಾರರಿಗೆ ‘ಡ್ಯುಯಲ್ ಕ್ಯಾಮೆರಾ’ ಎಂಬ ಹೊಸ ಫೀಚರ್ ಪರಿಚಯಿಸಿದೆ.

ಫ್ರಂಟ್ ಮತ್ತು ಬ್ಯಾಕ್ ಕ್ಯಾಮೆರಾಗಳನ್ನು ಏಕಕಾಲದಲ್ಲಿ ಬಳಸಿಕೊಂಡು ವಿಡಿಯೊ ಮಾಡುವ ವಿಶೇಷ ಫೀಚರ್ ಇದಾಗಿದೆ. ಫ್ಲಿಪ್ ಕ್ಯಾಮೆರಾ ಬಟನ್ ಆಯ್ಕೆಯನ್ನು ಇದರಲ್ಲಿ ನೀಡಲಾಗಿದ್ದು, ಪ್ರೈಮರಿ ಮತ್ತು ಸೆಕೆಂಡರಿಯಾಗಿ ಕ್ಯಾಮೆರಾ ಆಯ್ಕೆ ಮಾಡಲು ನೆರವಾಗುತ್ತದೆ. ಸದ್ಯದ ಮಟ್ಟಿಗೆ ಈ ಡ್ಯುಯಲ್ ಕ್ಯಾಮೆರಾ ಫೀಚರ್ ಐಒಎಸ್ ಬಳಕೆದಾರರಿಗೆ ಮಾತ್ರ ಲಭ್ಯವಿದ್ದು, ಶೀಘ್ರವೇ ಆಂಡ್ರಾಯ್ಡ್ ಫೋನ್‌ಗಳಿಗೂ ವಿಸ್ತಾರಗೊಳ್ಳಲಿದೆ.

ಈ ಫೀಚರ್‌ನಲ್ಲಿ ನಾಲ್ಕು ವಿಶೇಷ ಲೇಔಟ್‌ಗಳಿದ್ದು, ಅವುಗಳನ್ನು ಬಳಸಿಕೊಂಡು ವಿಡಿಯೊವನ್ನು ಮತ್ತಷ್ಟು ಆಕರ್ಷಕವಾಗಿಸಿ ಸ್ನ್ಯಾಪ್ ಮಾಡಬಹುದಾಗಿದೆ. ಬಳಕೆದಾರರು ಫೋಟೊಗಳು ಅಥವಾ ವಿಡಿಯೊಗಳಿಗೆ ಸಂಗೀತ, ಸ್ಟಿಕ್ಕರ್‌ಗಳು ಮತ್ತು ವರ್ಧಿತ ರಿಯಾಲಿಟಿ ಲೆನ್ಸ್‌ಗಳನ್ನು ಒಳಗೊಂಡಂತೆ ಅನೇಕ ಅಂಶಗಳನ್ನು ಸೇರಿಸಬಹುದಾಗಿದೆ.

## ಬಳಸುವುದು ಹೇಗೆ?

ಆ್ಯಪ್ ಅನ್ನು ಇತ್ತೀಚಿನ ಆವೃತ್ತಿಗೆ ಅಪ್‌ಡೇಟ್ ಮಾಡಿಕೊಳ್ಳಬೇಕು. ಬಳಿಕ ಆ್ಯಪ್ ಅನ್ನು ತೆರೆದರೆ ಕ್ಯಾಮೆರಾ ಸ್ಕ್ರೀನ್‌ನಲ್ಲಿ ಡ್ಯುಯಲ್ ಕ್ಯಾಮೆರಾ ಮತ್ತು ಚಾಟ್ ಕ್ಯಾಮೆರಾ ಆಯ್ಕೆಗಳು ಕಾಣುತ್ತವೆ. ಅದರಲ್ಲಿ ಡ್ಯುಯಲ್ ಕ್ಯಾಮೆರಾ ಆಯ್ಕೆ ಮಾಡಿಕೊಳ್ಳಬೇಕು. ಲಭ್ಯವಿರುವ ಬಗೆ ಬಗೆಯ ಲೇಔಟ್‌ಗಳನ್ನು ಟ್ರೈ ಮಾಡಿ ನಿಮಗಿಷ್ಟದ ಸ್ನಾಪ್ ತೆಗೆದುಕೊಳ್ಳಬಹುದು. ■